# ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಐ. ಸಿ. ಎ. ಆರ್.- ಕೃಷಿ ವಿಜ್ಞಾನ ಕೇಂದ್ರ

ಹನುಮನಮಟ್ಟಿ - 581135 ಜಿ: ಹಾವೇರಿ

ವಾರ್ತಾ ಪತ್ರ

ಸಂಪುಟ: 14 ಸಂಚಿಕೆ: 2 ಏಪ್ರಿಲ್-ಜೂನ್, 2016


## "ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆಯ ರೈತ ಸಮಾವೇಶ





ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ದಿನಾಂಕ: 03.04.2016ರಂದು "ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆಯ ರೈತ ಸಮಾವೇಶ, ಅರಿವು ಕಾರ್ಯಕ್ರಮ, ವಸ್ತು ಪ್ರದರ್ಶನ ಮತ್ತು ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಕಾರ್ಯಕ್ರಮ"ವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸನ್ಮಾನ್ಯ ಶ್ರೀ ಶಿವಕುಮಾರ ಉದಾಸಿ, ಮಾನ್ಯ ಸಂಸದರು, ಹಾವೇರಿ ಇವರು ವಿಜ್ಞಾನ ಮತ್ತು ತಂತ್ರಜ್ಞಾನ ಉಪಯೋಗಿಸಿಕೊಂಡು, ಕೃಷಿ ಆ್ಯಪ್, ಸ್ಯಾಟಲೈಟ ಮತ್ತು ಸ್ಮಾರ್ಟ್ ಫೋನ್ ಮುಖಾಂತರ ನಿಖರವಾಗಿ ಬೆಳೆಹಾನಿಯನ್ನು ತಿಳಿಯಲಾಗುವುದು ಹಾಗೂ ಪ್ರಧಾನ ಮಂತ್ರಿ ಬೆಳೆ ವಿಮೆ ಜೊತೆಗೆ ಇತರೆ ನೂತನ ಯೋಜನೆಗಳಾದ, ಪ್ರಧಾನ ಮಂತ್ರಿ ಸಿಂಚನ, ಯುನೈಟೆಡ್ ಪ್ಯಾಕೇಜ್ ಇನ್ಸುರೆನ್ಸ ಸಿಸ್ಟಂ (ಗಕಖಙ) ಬಗ್ಗೆ ವಿವರಿಸಿ, ಇದರ ಉಪಯೋಗ ಪಡೆಯಲು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬ್ಯಾಡಗಿ ಶಾಸಕರಾದ ಸನ್ಮಾನ್ಯ ಶ್ರೀ ಬಸವರಾಜ ಎನ್. ಶಿವಣ್ಣನವರ ಇವರು ನೈಸರ್ಗಿಕವಾಗಿ ದೊರೆಯುವ ಸಂಪನ್ಮೂಲಗಳಾದ ನೀರು, ಅರಣ್ಯ ಹಾಗೂ ಮಣ್ಣು ರಕ್ಷಿಸಲು ಸಲಹೆ ನೀಡಿದರು ಹಾಗೂ ಪ್ರಧಾನ ಮಂತ್ರಿ ಬೆಳೆ ವಿಮೆಯ ಲಾಭವನ್ನು ಪಡೆದುಕೊಳ್ಳಲು ಸೂಚಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಏಕನಾಥ ಭೀಮರೆಡ್ಡಿ ಬಾನುವಳ್ಳಿ, ಸದಸ್ಯರು, ಜಿಲ್ಲಾ ಪಂಚಾಯತ, ಹಾವೇರಿ ಇವರು ಯೋಜನೆಯ ರೂಪುರೇಷೆಗಳನ್ನು ತಿಳಿದುಕೊಂಡು ಯೋಜನೆಯನ್ನು ಅನಷ್ಠಾನಗೊಳಿಸಲು ತಿಳಿಸಿದರು. ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ. ವ್ಹಿ. ಐ. ಬೆಣಗಿ, ಇವರು ಅವಶ್ಯಕತೆಗೆ ತಕ್ಕಂತೆ ರಸಗೊಬ್ಬರಗಳ ಬಳಕೆ ಹಾಗೂ ಸುಧಾರಿತ ತಂತ್ರಜ್ಞಾನ ಉಪಯೋಗಿಸಿಕೊಂಡು ಹೆಚ್ಚಿನ ಇಳುವರಿ ಪಡೆಯಲು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಕೃಷಿ ವಸ್ತು ಪ್ರದರ್ಶನವನ್ನು ಕೂಡ ಏರ್ಪಡಿಸಲಾಗಿತ್ತು. ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣನವರ ಇವರು ಸಭಿಕರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿ ಕಾರ್ಯಕ್ರಮದ ವಿವರ ನೀಡಿದರು. ಜಿಲ್ಲೆಯ ಎಲ್ಲ ತಾಲ್ಲೂಕುಗಳಿಂದ ಸುಮಾರು 275 ಕ್ಕೂ ಹೆಚ್ಚು ರೈತರು/ರೈತ ಮಹಿಳೆಯರು ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಸೂಕ್ಷ್ಮ ನೀರಾವರಿ ಪದ್ಧತಿ ಕುರಿತು ತರಬೇತಿ ಕಾರ್ಯಕ್ರಮ






ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ದಿನಾಂಕ: 26.05.2016 ರಂದು "ಸೂಕ್ಷ್ಮ ನೀರಾವರಿ ಪದ್ಧತಿ" ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ತೋಟಗಾರಿಕೆ ಇಲಾಖೆ ಹಾವೇರಿ, ನಿಖರ ಬೇಸಾಯ ಅಭಿವೃದ್ಧಿ ಸಂಸ್ಥೆ, ಜಿಕೆವಿಕೆ ಬೆಂಗಳೂರು ಮತ್ತು ಮೈಕ್ರೋ ಇರಿಗೇಶನ್ ಸೊಸೈಟಿ ಅಫ್ ಇಂಡಿಯಾ ಮತ್ತು ಪ್ರಿಜನ್ ಫಾರ್ಮಿಂಗ್ ಡೆವಲಪ್ ಮೆಂಟ್ ಸೆಂಟರ್ ಇವರ ಜಂಟಿ ಅಶ್ರಯದಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

2ನೇ ಪುಟದಲ್ಲಿ ಮುಂದುವರೆದಿದೆ....

ಮೊದಲನೆಯ ಪುಟದಿಂದ ಮುಂದುವರೆದಿದೆ..............**ಸೂಕ್ಷ್ಮ ನೀರಾವರಿ ಪದ್ಧತಿ ಕುರಿತು ತರಬೇತಿ ಕಾರ್ಯಕ್ರಮ**

ಕಾರ್ಯಕ್ರಮವನ್ನು ಜಿ.ಕೆ.ವಿ.ಕೆ ಬೆಂಗಳೂರಿನ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಂ. ಚೌಡೇಗೌಡರವರು ನೆರವೇರಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಮುಖ್ಯ ಅತಿಥಿಗಳಾದ ಡಾ. ಆರ್. ಕೃಷ್ಣ ಮನೋಹರವರು ಸೂಕ್ಷ್ಮ ನೀರಾವರಿ ಪದ್ಧತಿಯನ್ನು ರೈತರ ಕ್ಷೇತ್ರದಲ್ಲಿ ಅಳವಡಿಸುವಲ್ಲಿ ಡೀಲರ್ ಗಳ ಪಾತ್ರ ಮುಖ್ಯವಾಗಿದ್ದು ಈ ತರಬೇತಿಯ ಪ್ರಯೋಜನ ಪಡೆಯಲು ಕರೆ ನೀಡಿದರು. ತೋಟಗಾರಿಕಾ ಇಲಾಖೆಯ ಉಪನಿರ್ದೇಶಕರಾದ ಡಾ. ವಿ.ಎಸ್. ಭೋಗಿಯವರು ಇಲಾಖೆಯಿಂದ ಸೂಕ್ಷ್ಮ ನೀರಾವರಿಗೆ ಇರುವ ಯೋಜನೆಗಳ ಸೌಲಭ್ಯ ಪಡೆಯುವಂತೆ ತಿಳಿಸಿದರು. ಮುಖ್ಯ ಅತಿಥಿಗಳಾಗಿ ಅಗಮಿಸಿದ ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿಯ ಡಾ. ಎಲ್ ಮಂಜುನಾಥರವರು ತರಬೇತಿ ಪ್ರಸಕ್ತ ದಿನಗಳಲ್ಲಿ ಅತ್ಯಂತ ಬೇಡಿಕೆಯ ವಿಷಯವಾಗಿದ್ದು ವಿಷಯಗಳನ್ನು ಅರಿತು ಅದರಂತೆ ಕಾರ್ಯಸೂಚಿ ರೂ ಸಿಕೊಳ್ಳುವಂತೆ ಕಿವಿಮಾತು ಹೇಳಿದರು. ತರಬೇತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಡಿ.ಎಸ್.ಎಂ. ಗೌಡ, ಡಾ. . ಅಶೋಕ, ಡಾ. ಚೌಡೇಗೌಡ, ಡಾ. ಕೃಷ್ಣಮನೋಹರ, ಡಾ. ಕಿರಣಶಂಕರ, ಡಾ. ಶ್ರೀಕಾಂತ ಇವರುಗಳು ಅಗಮಿಸಿ ತಾಂತ್ರಿಕ ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಹಾವೇರಿ ಮತ್ತು ಉತ್ತರಕನ್ನಡ ಜಿಲ್ಲೆಯ 72 ಸೂಕ್ಷ್ಮ ನೀರಾವರಿ ವಿತರಕರು ಅಗಮಿಸಿ ಇದರ ಪ್ರಯೋಜನ ಪಡೆದರು.

## ಗುಂಪು ಚರ್ಚೆ



ಇಟಗಿ (ರಾಣೇಬೆನ್ನೂರು)



ಅಸುಂಡಿ (ರಾಣೇಬೆನ್ನೂರು)



ಲಕ್ಮಾಜಿಕೊಪ್ಪ (ಬ್ಯಾಡಗಿ)



ಬಸಾಪುರ (ಹಾವೇರಿ)

**2016–17 ನೇ ಸಾಲಿನಲ್ಲಿ ಕೇಂದ್ರದ ವತಿಯಿಂದ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಈ ಕೆಳಕಂಡ ಗ್ರಾಮಗಳಿಗೆ ವಿಜ್ಞಾನಿಗಳು ಭೇಟಿ ನೀಡಿ ರೈತರೊಂದಿಗೆ ಗುಂಪು ಚರ್ಚೆ ನಡೆಸಿದರು. ಅಯಾ ಗ್ರಾಮಗಳಲ್ಲಿ ಬೆಳೆಯಲಾಗುವ ಮುಖ್ಯ ಬೆಳೆಗಳು ಅವುಗಳಿಗೆ ಬರುವ ರೋಗ, ಕೀಟ ಬಾಧೆ ಹಾಗು ನೂತನ ತಾಂತ್ರಿಕತೆಗಳ ಬಗ್ಗೆ ಅವರಿಗಿರುವ ಮಾಹಿತಿ ಕುರಿತು ಚರ್ಚಿಸಿ 2016–17 ರ ಕಾರ್ಯಕ್ರಮ ರೂ ಸಲಾಯಿತು.**

## ಕೃಷಿ ಅಭಿಯಾನ ಕಾರ್ಯಕ್ರಮ




ರೈತ ಸಂಪರ್ಕ ಕೇಂದ್ರ ಹಾನಗಲ್ಲನಲ್ಲಿ ದಿ.27.05.2016 ರಂದು ಕೃಷಿ ಅಭಿಯಾನ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮಕ್ಕೆ ತಾಲ್ಲೂಕು ಪಂಚಾಯತಿಯ ಅಧ್ಯಕ್ಷರಾದ ಶ್ರೀ ಶಿವಬಸಪ್ಪ ಪೂಜಾರರವರು ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷರಾದ ಹಾನಗಲ್ಲಿನ ಸಹಾಯಕ ಕೃಷಿ ನಿರ್ದೇಶಕರಾದ ಡಾ. ಜಿ. ಬಸವರಾಜರವರು ಕೃಷಿ ಅಭಿಯಾನದ ಮಹತ್ವದ ಕುರಿತು ತಿಳಿಸಿದರು. ರೈತ ಸಂಪರ್ಕ ಕೇಂದ್ರದ ಸಂಪರ್ಕ ಅಧಿಕಾರಿ ಮತ್ತು ಕೃಷಿ ವಿಜ್ಞಾನ ಕೇಂದ್ರ ವಿಜ್ಞಾನಿಯಾದ ಶ್ರೀಮತಿ ಗೀತಾ ತಾಮಗಳೆಯವರು ಕೃಷಿ ಇಲಾಖೆ ಮತ್ತು ಕೊಪ್ಪರಸಿಕೊಪ್ಪದ ಗ್ರಾಮ ಪಂಚಾಯಿತಿಯಲ್ಲಿ ನಡೆದ ಕೃಷಿ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ರೈತರಿಗೆ ಕೃಷಿ ವಿಜ್ಞಾನ ಕೇಂದ್ರದಿಂದ ಲಭ್ಯವಿರುವ ಸೇವೆಗಳ ಕುರಿತು ವಿವರಿಸಿದರು. ಹಾನಗಲ್ಲಿನ ಸುಮಾರು 30 ಜನ ರೈತರು ಮತ್ತು ಕೊಪ್ಪರಸಿಕೊಪ್ಪದಲ್ಲಿ 25 ಜನ ರೈತರು ಭಾಗವಹಿಸಿದ್ದರು. ಕಾರ್ಯಾಕ್ರಮದಲ್ಲಿ ತಾಲ್ಲೂಕು ಪಂಚಾಯಿತಿಯ ಉಪಾಧ್ಯಕ್ಷೆ ಶ್ರೀಮತಿ ಸರಳಾ ಜಾಧವ ಮತ್ತು ಜಿಲ್ಲಾ ಪಂಚಾಯತಿ ಸದಸ್ಯರಾದ ಶ್ರೀ ರಾಘವೇಂದ್ರ ತಹಶೀಲ್ದಾರರವರು ಸಹ ಭಾಗವಹಿಸಿದ್ದರು.







ಕೃಷಿ ಇಲಾಖೆ, ಬ್ಯಾಡಗಿ ಇವರು ಹಮ್ಮಿಕೊಂಡಿದ್ದ 3 ದಿನದ ಕೃಷಿ ಅಭಿಯಾನ ಕಾರ್ಯಕ್ರಮವು ದಿನಾಂಕ : 24.05.2016 ರಂದು ಮುಕ್ತಾಯಗೊಂಡಿತು. ಬ್ಯಾಡಗಿ ಪಟ್ಟಣದ ಸಾಮರ್ಥ ಸೌಧದಲ್ಲಿ ದಿನಾಂಕ: 26.05.2016 ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಸುಮಾರು 50 ಕ್ಕೂ ಹೆಚ್ಚು ರೈತರು ಪಾಲ್ಗೊಂಡಿದ್ದರು. ರೈತರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿಯ ವಿಜ್ಞಾನಿ ಡಾ. ಯಶಸ್ವಿನಿ ಶರ್ಮಾ ಅವರು ತೋಟಗಾರಿಕೆ ಬೆಳೆಗಳ ಸುಧಾರಿತ ಬೇಸಾಯ ಕಾರ್ಯಕ್ರಮಗಳ ಬಗ್ಗೆ ಚರ್ಚೆ ನಡೆಸಿದರು. ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ. ಎಚ್. ಬಿ. ಗೌಡಪ್ಪಳವರ, ಪಶುಸಂಗೋಪನಾ ಸಹಾಯಕ ನಿರ್ದೇಶಕ, ಡಾ. ಗೋ  ನಾಥನ್. ಕೃಷಿಕ ಸಮಾಜದ ಅಧ್ಯಕ್ಷ ಶ್ರೀ ಗಂಗಣ್ಣ ಎಲಿ, ರೈತ ಮುಖಂಡರಾದ ಶಂಕರಗೌಡ ಪಾಟೀಲ, ಬಸವರಾಜ ಸಂಕಣ್ಣನವರ, ನಿಂಗಪ್ಪ ದೇವಗಿರಿ, ಮಲ್ಲಿಕಾರ್ಜುನ ಬಳ್ಳಾರಿ ಮುಂತಾದವರು ಭಾಗವಹಿಸಿದ್ದರು.

## ಪರಿಸರ ದಿನಾಚರಣೆ





ದಿನಾಂಕ 06.06.2016 ರಂದು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ರಸ್ತೆ ಬದಿಗಳಲ್ಲಿ ಸಸಿಗಳನ್ನು ನೆಡಲಾಯಿತು. ಇದರ ಜೊತೆಗೆ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಹುಣಸೆ, ಶ್ರೀಗಂಧ, ಕಾಡು ಬಾದಮಿ ಮತ್ತು ನೇರಳೆ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಸರೋಜನಿ ಜೆ. ಕರಕಣ್ಣವರ, ಶ್ರೀ ಡಿ.ಎಸ್.ಎಂ. ಗೌಡ, ಡಾ.ಎಸ್.ಎ.ಅಷ್ಟಪುತ್ರೆ, ಶ್ರೀಮತಿ ಗೀತಾ ಎಸ್ ತಾಮಗಾಳೆ, ಡಾ. ಅಶೋಕ  ., ಡಾ. ಯಶಸ್ವಿನಿ ಶರ್ಮಾ, ರೇಖಾ, ಕೃಷಿ ಕಾರ್ಮಿಕರು ಮುಂತಾದವರು ಭಾಗವಹಿಸಿದ್ದರು.

## ಮುಂಚೂಣಿ ಪ್ರಾತ್ಯಕ್ಷಿಕೆಗಳ ತಾಕುಗಳಿಗೆ ವಿಜ್ಞಾನಿಗಳ ಭೇಟಿ



ಸುಸ್ಥಿರ ಕಬ್ಬು ಕೃಷಿ (ಎಸ್.ಎನ್.ಕೆ.–07680) ಮುಂಚೂಣಿ ಪ್ರಾತ್ಯಕ್ಷಿಕೆ ಕೈಗೊಳ್ಳಲಾದ ಮುಷ್ಟುರು ಹಾಗೂ ಚಿಕ್ಕಮಾಗನೂರು ಗ್ರಾಮಗಳಿಗೆ ಕೇಂದ್ರದ ವಿಜ್ಞಾನಿಗಳು ಭೇಟಿ ನೀಡಿ ಸೂಕ್ತ ಸಲಹೆ ನೀಡಿದರು.

## 40 ನೇ – ವೈಜ್ಞಾನಿಕ ಸಲಹಾ ಸಮಿತಿ ಸಬೆ





ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಆವರಣದಲ್ಲಿ 40 ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯ ಸಭೆಯನ್ನು ದಿನಾಂಕ :10.06.2016 ರಂದು ಹಮ್ಮಿಕೊಳ್ಳಲಾಗಿತ್ತು. ಬೆಂಗಳೂರು ಅಟಾರಿ ಕಛೇರಿಯ ವಿಜ್ಞಾನಿಗಳಾದ ಡಾ. ಚಂದ್ರೇಗೌಡ ಹಾಗೂ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವಿಸ್ತರಣಾ ನಿರ್ದೇಶಕರಾದ ಡಾ. ವ್ಹಿ. ಐ. ಬೆಣಗಿಯವರ ಮಾರ್ಗದರ್ಶನದಲ್ಲಿ ಸಭೆಯನ್ನು ನಡೆಸಲಾಯಿತು. ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಪ್ರಗತಿ ಪರ ರೈತರು ಹಾಗೂ ರೈತ ಮಹಿಳೆಯರು ಸಭೆಯಲ್ಲಿ ಭಾಗವಹಿಸಿ ಕೇಂದ್ರದ ಕಾರ್ಯ ಚಟುವಟಿಕೆಗಳ ಕುರಿತು ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು. 2015–16 ನೇ ಸಾಲಿನ ಮುಂಚೂಣಿ ಪ್ರಾತ್ಯಕ್ಷಿಕೆ ಹಾಗೂ ಕ್ಷೇತ್ರ ಪರೀಕ್ಷೆಗಳನ್ನು ಕೈಗೊಂಡ ರೈತರು ಸಹ ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

## ಒಳ ಆವರಣ ತರಬೇತಿ ಕಾರ್ಯಕ್ರಮಗಳು


ತಾರಸಿ ತೋಟ–27.05.16


ಮೆಕ್ಕ ಜೋಳದ ಪರ್ಯಾಯ ಬೆಳೆಯಾಗಿ ತೊಗರಿ ಹಾಗೂ ಅವುಗಳಲ್ಲಿ ಸಸ್ಯ ಸಂರಕ್ಷಣೆ–30.05.2016


ಈರುಳ್ಳಿ ಬೆಳೆಯ ಸುಧಾರಿತ ಬೇಸಾಯ ಕ್ರಮಗಳು–02.06.2016


ಟೊಮ್ಯಾಟೋ ಮತ್ತು ಮೆಣಸಿನಕಾಯಿಯಲ್ಲಿ ಸುಧಾರಿತ ಬೇಸಾಯ ಕ್ರಮಗಳು–13.06.2016

## ಹೊರ ಆವರಣ ತರಬೇತಿ ಕಾರ್ಯಕ್ರಮಗಳು


ಸಮಗ್ರ ಕಳೆ ನಿರ್ವಹಣೆ– ಮಾಸೂರು–06.05.2016


ಗೋವಿನಜೋಳ ಬೆಳೆಯ ಪರ್ಯಾಯ ಬೆಳೆಗಳ ಆಯ್ಕೆ ಹಾಗೂ ಬೀಜೋಪಚಾರ ಕ್ರಮಗಳು,ಸುತ್ತಕೋಟಿ–30.05.2016

### ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಈ ಕೆಳಕಂಡ ತರಬೇತಿಗಳಿಗೆ ಹಾಜರಾಗಿ ತಮ್ಮ ಜ್ಞಾನ ಕೌಶಲ್ಯಗಳನ್ನು ಹೆಚ್ಚಿಸಿಕೊಂಡರು

| Sl. No. | Scientist | Training title | Date & duration | Place |
|---|---|---|---|---|
| 1 | Mr. D.S.M. Gouda | Skill for porfitable agriculture through mechanization | 31.05.2016 to 04.06.2016 (5 Days) | EEI, Hydrabad |
| 2 | Dr. S.A. Ashtaputre | Plant quarantine national proedure & regulations | 20.06.2016 to 24.06.2016 (5 days) | NIPHM, Hydrabad |
| 3 | Mrs. Geeta S Tamagale | Harnessing social media for Agricultural development | 20.06.2016 to 23.06.2016 (4 days) | TNAU, Coimbatore |

ಸಂಪಾದಕರು ಹಾಗೂ ಪ್ರಕಾಶಕರು : ಡಾ. ಸರೋಜನಿ ಜೆ ಕರಕಣ್ಣವರ
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ–581115
ಸಹ ಸಂಪಾದಕರು : ಶ್ರೀಮತಿ ಗೀತಾ ಎಸ್. ತಾಮಗಳೆ
ಲೇಖಕರು : ಶ್ರೀ. ಡಿ. ಎಸ್. ಮಲ್ಲಿಕಾರ್ಜುನಪ್ಪ ಗೌಡ, ಡಾ. ಎಸ್. ಎ. ಅಷ್ಟಪುತ್ರೆ, ಡಾ. ಅಶೋಕ ಮತ್ತು ಡಾ. ಯಶಸ್ವಿನಿ
ಅಕ್ಷರ ಜೋಡಣೆ ಮತ್ತು ವಿನ್ಯಾಸ : ಶ್ರೀ ಉಳವಪ್ಪ ಶಿವೋಜಿ, ಡಿಟಿ , ಘಟಕ ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ
ಕು. ರೇಖಾ ಕೆ. ಎನ್., ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ–58111

ಇಂದ,
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ
ಹನುಮನಮಟ್ಟಿ –581135 ಜಿ: ಹಾವೇರಿ
ದೂರವಾಣಿ : 08373–253524
ಮಿಂಚಂಚೆ : kvk_haveri@rediffmail.com
ವೆಬ್‌ಸೈಟ್ : www.kvkhaveri.org

ಗೆ,
____________________

ತೆರೆದ ಅಂಚೆ